ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಸಿಂದಗಿ
ಕ್ರಿಮಿನಲ್ ಕೇಸ್ ನಂ.288/2018

ಸಿ.ಡಬ್ಲೂ:1 ಪಿ.ಡಬ್ಲೂ:1

ಸಾಕ್ಷಿಗೆ ದಿನಾಂಕ :-25/08/2022 ರಂದು ಪ್ರಮಾಣಿಕರಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಬಂದೇನವಾಜ |
| ತಂ/ಗಂ. ಹೆಸರು | ಮಿಠ್ಠೆಸಾಬ ಮರೋಳ |
| ವಯಸ್ಸು | 42 ವರ್ಷ |
| ಉದ್ಯೋಗ | ಕೂಲಿ |
| ವಾಸಸ್ಥಳ | ದೇವರ ಹಿಪ್ಪರಗಿ |

ಮುಖ್ಯ ವಿಚಾರಣೆ : ಶ್ರೀ ಎಪಿಪಿ ಯವರಿಂದ

ನನಗೆ 3 ಜನ ಮಕ್ಕಳು ಅವರೆಂದರೆ ಖಾಲಿದ, ರಫಿಕ ಮತ್ತು ಮುಸ್ತಫಾ. 3 ಜನ ಮಕ್ಕಳು ದೇವರ ಹಿಪ್ಪರಗಿಯಲ್ಲಿ ಉದುರ್ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು.ದಿನಾಂಕ 06-12-2017 ಮದ್ಯಾಹ್ನ 3.00 ಗಂಟೆಗೆ ನನ್ನ ಮಕ್ಕಳು ಶಾಲೆಯಲ್ಲಿ ಆಟವಾಡುತ್ತಿದ್ದಾಗ ರಫಿಕ ಎನ್ನುವವನು ಮೋಟಾರ್ ಸೈಕಲ್ ತೆಗೆದುಕೊಂಡು ಬಂದು ಖಾಲಿದ ಎಂಬುವವನಿಗೆ ಹಾಯಿಸಿ ಅಪಘಾತಪಡಿಸಿರುತ್ತಾನೆ. ಸದರಿ ಶಾಲೆಯ ಮುಖ್ಯೋಪಾದ್ಯಯರು ಫೋನ್ ಮಾಡಿ ವಿಷಯ ತಿಳಿಸಿದ್ದರಿಂದ ಗೊತ್ತಾಯಿತು. ಬಂದು ಮಗುವನ್ನು ನೋಡಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ನಾನು ಬಂದು ನೋಡಲು ಅಲ್ಲಿ ನನ್ನ ಮಗ ಬಿದ್ದಿದ್ದ. ಆತನಿಗೆ ಎಡಗೈ ಭುಜದ ಮೇಲೆ ತೀವ್ರ ಸ್ವರೂಪದ ಗಾಯವಾಗಿತ್ತು. ಅಲ್ಲಲ್ಲಿ ತರಚಿದ ಗಾಯವಾಗಿತ್ತು. ನಾನು ಹೋದಾಗ ಸದರಿ ವಾಹನ ಅಲ್ಲೆ ಇತ್ತು. ಕೆಎ /28/ಟಿಸಿ/0026 ಅಂತಾ ಇತ್ತು. ಆರೋಪಿ ರಫಿಕ ಅದೇ ಸ್ಥಳದಲ್ಲಿದ್ದ. ವಿಜಯಪೂರದ ಹಾತಿವಾಲೆ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಸದರಿ ನನಗೆ ಮುಖೋಪ್ಯಾದ್ಯಾಯರು ಹೇಳಿದ್ದನೇಂದರೆ ಆರೋಪಿ ವೇಗವಾಗಿ ಚಲಾಯಿಸಿ ಅಪಘಾತಸಿರುತ್ತಾನೆ ಎಂದು ನನಗೆ ಹೇಳಿದ್ದರು. ದೂರನ್ನು ನನ್ನ ತಮ್ಮ ಚಾ ಸಾ 10 ರವರ ಬರೆದಿರುತ್ತಾರೆ. ಸದರಿ ದೂರಿನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ. 1 ಎಂದು ಗುರುತಿಸಲಾಯಿತು. ಸಹಿ ನಿಪಿ. 1 ಎ ಎಂದು ಗುರುತಿಸಲಾಯಿತು. ನಂತರ ಪೋಲಿಸರು ದಿನಾಂಕ 08-12-2018 ರಂದು ಪಂಚನಾಮೆ 3 ರಿಂದ 3.30 ಗಂಟೆ ಆಗಿರಬಹುದು. ಪಂಚನಾಮೆ ಮಾಡುವ ಸಮಯದಲ್ಲಿ ಚಾ ಸಾ 2 ಮತ್ತು 3 ರವರು ಹಾಜರಿದ್ದರು. ಪಂಚನಾಮೆ ಸಮಯದಲ್ಲಿ ಭಾವ ಚಿತ್ರ ತೆಗೆದಿರುತ್ತಾರೆ. ಸಾಕ್ಷಿ ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಪಿ. 2 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಹಿ ನಿಪಿ. 2 ಎ ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಪಂಚನಾಮೆಯ ಭಾವ ಚಿತ್ರ ಕಡತದಲ್ಲಿ ಇರದೇ ಇದ್ದ ಕಾರಣ ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಗೆ ಮುಂದುಡಲಾಯಿತು.**

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,
ಸಿಂದಗಿ